Date: 05-04-2025 O.S.No. 204/2022

(PW-2)

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀಸವಾಲುಃ- ಶ್ರೀ ಎಮ್.ಬಿ.ಎನ್. ವಕೀಲರಿಂದಃ ಪ್ರತಿವಾದಿ ಪರಃ</u>

ನಾನು ಡಿಪ್ಲೋಮೋ ಶಿಕ್ಷಣ ಹುಕ್ಕೇರಿಯಲ್ಲಿ ಕಲಿತ್ತಿದ್ದೇನೆ. ನನಗೆ ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ಕೋರ್ಟನಿಂದ ಸಮನ್ಸ ಬಂದಿರುವುದಿಲ್ಲ. ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ನನಗೆ ಎಮ್.ಬಿ.ಬಿ ವಕೀಲರು ಹೇಳಿದರು. ಈ ದಾವೆಯನ್ನು ಶಂಕರ ಚಿಮಣೆ ಅನ್ನುವವರು ವಿಜಯಶಂಕರ ಅನ್ನುವವರ ವಿರುದ್ಧ ದಾಖಲಿಸಿದ್ದಾರೆ. ಕರಾರು ಪತ್ರದ ಪ್ರಕಾರ ಶಂಕರ ನಡೆದುಕೊಳ್ಳದೆ ಇದ್ದುದ್ದರಿಂದ ಈ ಕೇಸ್ ದಾಖಲಾಗಿದೆ. ಪ್ರತಿವಾದಿ ಅಂಕಲಿ ಗ್ರಾಮದಲ್ಲಿ ವಾಸ ಇದ್ದಾನೆ. ದಾವೆದ ಆಸ್ತಿ ಕಮತನೂರ ಗ್ರಾಮದಲ್ಲಿ ಬರುತ್ತದೆ, ಸದರಿ ಜಮೀನಿನ ಸ.ನಂ.278/4 ಇರುತ್ತದೆ. ಸದರಿ ಜಮೀನು 1 ಎಕರೆ 20 ಗುಂಟೆ ಇರುತ್ತದೆ, ಆದರೆ ಕರಾರು 1 ಎಕರೆಗೆ ಆಗಿರುತ್ತದೆ.

ವಾದಿ ಮತ್ತು ನಾನು ಸಂಕೇಶ್ವರದ ಹೀರಾ ಶುಗರ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದುದ್ದರಿಂದ ಅವರ ಪರಿಚಯ ಇತ್ತು, ಪ್ರತಿವಾದಿ ವಾದಿಗೆ ಭೇಟಿಯಾಗಲು ಬಂದಾಗ ನನಗೆ ಅವರ ಪರಿಚಯ ಆಗಿದೆ. ಸಾಕ್ಷಿ ಪ್ರಮಾಣ ಪತ್ರ ಬರೆಯಲು ವಕೀಲರಿಗೆ ನಾನೆ ಮಾಹಿತಿ ಕೊಟ್ಟಿದ್ದೇನೆ ಅಂತ ಹೇಳುತ್ತಾರೆ. ಪ್ರತಿವಾದಿಯನ್ನು ನಾನು ಕರಾರು ಪತ್ರ ಬರೆಯುವ ಮೊದಲು 4-5 ಭಾರಿ ನೋಡಿದ್ದೇನೆ.

ನಿಪಿ-1 ಕರಾರು ಪತ್ರವನ್ನು ಬರೆಯಲು ಪ್ರತಿವಾದಿ ಶಂಕರ ಪತ್ರ ಬರಹಗಾರರಿಗೆ ಮಾಹಿತಿ ಕೊಟ್ಟಿರುತ್ತಾನೆ. ನಿಪಿ-1ರಲ್ಲಿ ಬರೆದ ವಿಷಯ ನಿಜ ಇರುತ್ತದೆ. ಸ.ನಂ.278/4ರ ಯಾವ ಭಾಗದ 1 ಎಕರೆ ಜಮೀನು ಮಾರಾಟ ಮಾಡಿದ್ದಾರೆ ಅಂತ ನಿಪಿ-1ರಲ್ಲಿ ನಮೂದಿಸಿಲ್ಲ ಅಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಜಮೀನು ಮಾರಾಟ ಮಾಡಲು ಯಾವ ಅಡಚಣೆ ಇತ್ತು ಅಂತ ನಾನು ವಿಚಾರಿಸಿಲ್ಲ. ದಾವೆದ ಆಸ್ತಿಯ ಚೆಕಬಂದಿ ನನಗೆ ಹೇಳಲು ಬರುವುದಿಲ್ಲ. ಖರೀದಿ ವ್ಯವಹಾರ 6ಲಕ್ಷ ರೂಗೆ ಆಗಿದೆ. ಕ್ರಯದ ಮಾತುಕತೆ ಯಾವಾಗ ಆಗಿದೆ ಅಂತ ನನಗೆ ಗೊತ್ತಿಲ್ಲ, ಮಾತಕತೆ ಕಾಲಕ್ಕೆ ನಾನು

ಹಾಜರಿರಲಿಲ್ಲ. ವಾದಿ ಪ್ರತಿವಾದಿಗೆ 5 ಲಕ್ಷ ರೂ ಮುಂಗಡ ಹಣ ನನ್ನ ಸಮಕ್ಷಮ ಕೊಟ್ಟಿಲ್ಲ. ವಾದಿ ಪ್ರತಿವಾದಿಗೆ ಹಂತ ಹಂತವಾಗಿ 5 ಲಕ್ಷ ರೂ ಮುಂಗಡ ಹಣ ಕೊಟ್ಟಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕರಾರು ಪತ್ರವನ್ನು ದಿಃ 16.01.2021 ರಂದು ಬರೆದಿರುತ್ತಾರೆ, ಆ ಕಾಲಕ್ಕೆ ನಾನು, ಧರೆಪ್ಪ, ಶಂಕರ ಚಿಮಣೆ ಮತ್ತು ವಾದಿ ಹಾಜರಿದ್ದೆವು, ಪ್ರಶಾಂತ ಕುಮಾರ ಕೋರಿ ನಿಪಿ-1 ಬರೆದಿದ್ದಾರೆ. ಪ್ರತಿವಾದಿಯರ ಜೊತೆ ಆ ದಿನ ಯಾರು ಬಂದಿದ್ದರು ಅಂತ ಗೊತ್ತಿಲ್ಲ. ಕರಾರು ಪತ್ರಕ್ಕೆ ಮೊದಲು ಧರೆಪ್ಪ ಸಹಿ ಮಾಡಿದ್ದಾನೆ, ನಂತರ ನಾನು ಸಹಿ ಮಾಡಿದ್ದೇನೆ. ದಾವೆದ ಆಸ್ತಿಯ ಉತಾರ ನಾನು ನೋಡಿಲ್ಲ. ದಾವೆದ ಆಸ್ತಿ ಯಾರ ಹೆಸರಿನಲ್ಲಿದೆ ಅಂತ ನಾನು ಚೌಕಾಶಿ ಮಾಡಿಲ್ಲ.

ಪ್ರತಿವಾದಿ ಶಂಕರ ಈತನಿಗೆ ವಯಸ್ಸಾಗಿದ್ದು, ಸರಿಯಾಗಿ ಕಣ್ಣು ಕಾಣುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗೆ 75-80 ವರ್ಷ ವಯಸ್ಸಾಗಿದೆ ಅಂದರೆ ಸರಿಯಲ್ಲ. ಪ್ರತಿವಾದಿಗೆ ಓದಲು ಮತ್ತು ಬರೆಯಲು ಬರುವ ವಿಷಯ ನನಗೆ ಗೊತ್ತಿಲ್ಲ. ನಾನು ದಾವೆದ ಆಸ್ತಿಗೆ ಭೇಟಿ ನೀಡಿಲ್ಲ. ದಾವೆದ ಆಸ್ತಿ ಸಂಕೇಶ್ವರದಿಂದ 1 ಕಿ.ಮೀ ಒಳಗೆ ಇರುತ್ತದೆ. ಸದರಿ ದಾವೆದ ಆಸ್ತಿಯ ಸುತ್ತ ಮುತ್ತಲೂ NA ಫ್ಲಾಟುಗಳು ಆಗಿವೆ ಅಂದರೆ ನನಗೆ ಗೊತ್ತಿಲ್ಲ. ದಾವೆದ ಆಸ್ತಿ ನೀರಾವರಿ ಜಮೀನು ಇದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಪ್ರತೀ ಎಕರೆ 50-60 ಲಕ್ಷ ರೂ ಬೆಲೆ ಬಾಳುತ್ತದೆ ಅಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ನನಗೆ ಪರಿಚಯ ಇದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಕರಾರು ಪತ್ರ ಬರೆಯುವ ಕಾಲಕ್ಕೆ ವಾದಿ ಕರೆದುಕೊಂಡು ಬಂದಿದ್ದರು. ಈ ಕೇಸಿನ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಸಹ, ವಾದಿ ನನ್ನ ಗೆಳೆಯ ಇರುವುದರಿಂದ ಆತನ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿ ಎತ್ತಿಹಾಕುವ ಉದ್ದೇಶದಿಂದ ನಾವು ಮತ್ತು ಪತ್ರ

Date: 05-04-2025 O.S.No. 204/2022

(PW-2)

ಬರಹಗಾರ ವಾದಿಯ ಜೊತೆ ಮೀಲಾಫಿಯಾಗಿ ಸುಳ್ಳು ಕರಾರು ಪತ್ರ ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ಕರಾರು ಪತ್ರಕ್ಕೆಪ್ರತಿವಾದಿಯ ಹೆಂಡತಿ-ಮಕ್ಕಳು ಸಹಿ ಮಾಡಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸುಳ್ಳು ಇವೆ ಅಂದರೆ ಸರಿಯಲ್ಲ. ನಿಪಿ-1 ಆಗುವ ಕಾಲಕ್ಕೆ ವಾದಿ ಪ್ರತಿವಾದಿಗೆ 5 ಲಕ್ಷ ರೂ ಹಣ ಕೊಟ್ಟಿದ್ದು, ಕ್ರಯಪತ್ರ ಮಾಡಿಕೊಡುವ ಕಾಲಕ್ಕೆ ಉಳಿದ 1 ಲಕ್ಷ ರೂ ಕೊಡುವ ಷರತ್ತು ಇತ್ತು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

Sd/- 05.04.25

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ